ಶ್ರೀ ಎಸ್. ಆರ್. ಬೊಮ್ಮಾಯಿ.—ಬರಗಾಲ ಎಂದು ಘೋಷಣೆಯನ್ನು ಮಾಡಿದಾಗ ಆ ವರ್ಷದ ಕಂದಾಯವನ್ನು ವಸೂಲ್ಮಾಡುವುದನ್ನು ಮನ್ನಾ ಮಾಡುತ್ತೇವೆ. ಎಲ್ಲಿ ೨೫ ಪರ್ಸೆಂಟ್‌ಗಿಂತ ಕಡಿಮೆ ಬೆಳೆಯಾಗುತ್ತದೆ ಆ ಪ್ರದೇಶದಲ್ಲಿ ಕಂದಾಯವನ್ನು ಮನ್ನಾ ಮಾಡುತ್ತೇವೆ.

ಶಿಶುಪಾಲನಾ ಕೇಂದ್ರಗಳ ಸ್ಥಾಪನೆ

೧೭೦೬. ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಬ್ಬಿ ತಾಲ್ಲೂಕಿನಲ್ಲಿ ಶಿಶುಪಾಲನಾ ಕೇಂದ್ರಗಳಿರುವ ಗ್ರಾಮಗಳಾವುವು ?

ಆ) ಸದರಿ ಕೇಂದ್ರಗಳನ್ನು ಮಂಜೂರು ಮಾಡಲು ಕುನ್ನಾಲ, ನಿಟ್ಟೂರು ಕಡಬ, ಸಿ.ಎಸ್.ಪುರ ಹಾಗೂ ಗೋಪಾಲಪುರ ಗ್ರಾಮದ ಸಾರ್ವಜನಿಕರಿಂದ ಮನವಿ ಬಂದಿರುವುದು ನಿಜವೇ ?

ಇ) ಹಾಗಿದ್ದಲ್ಲಿ, ಪ್ರಾರಂಭ ಮಾಡುವುದು ಯಾವಾಗ ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಗುಬ್ಬಿ ತಾಲ್ಲೂಕಿನ ಗೊಲ್ಲಹಳ್ಳಿ, ಬೇವತ್ತ, ಕಡಬ ಮತ್ತು ಬೀದರ್ ಗ್ರಾಮಗಳಲ್ಲಿ ಶಿಶುಪಾಲನಾ ಕೇಂದ್ರಗಳು ನಡೆಯುತ್ತಿವೆ.

ಆ) ಮನವಿ ಬಂದಿರುವುದಿಲ್ಲ.

ಇ) ಹೊಸದಾಗಿ ಶಿಶುಪಾಲನಾ ಕೇಂದ್ರ ಪ್ರಾರಂಭ ಮಾಡಲು ಪ್ರಸ್ತಾವನೆಗಳು ಬಂದಾಗ ಈ ಬಗ್ಗೆ ಪರಿಶೀಲಿಸಿ ನಂತರ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಜಿ. ಎಸ್. ಶಿವನಂಜಪ್ಪ.—ಸ್ವಾಮಿ, ಕುನ್ನಾಲ, ನಿಟ್ಟೂರು ಮಂಡಲ ಪಂಚಾಯಿತಿ ಕಲ್ಲೂರು, ಸಿ.ಎಸ್.ಪುರ, ಗೋಪಾಲ ಪುರ ಮಂಡಲ ಪಂಚಾತಿಯಲ್ಲಿ ರೆಸಲ್ಯೂಷನ್ ಮಾಡಿ ನಿಮ್ಮ ಇಲಾಖೆಗೆ ಕಳುಹಿಸಿದ್ದಾರೆ. ಅದಕ್ಕೆ ನಾನು ಕೂಡ ಕವರಿಂಗ್ ಲೆಟರ್‌ನ್ನು ಬರೆದಿದ್ದೇನೆ. ಇಲಾಖೆಯ ಬೇಡಿಕೆ ಬಂದಾಗ ಇದಕ್ಕೆ ಉತ್ತರ ಹೇಳುತ್ತೇನೆಂದು ತಾವು ಹೇಳುವುದಕ್ಕೆ ಬದಲಾಗಿ, ನಾನೇ ಈಗ ಕೇಳುತ್ತಿದ್ದೇನೆ, ತಾವು ಇದನ್ನು ಯಾವಾಗ ಮಂಜೂರು ಮಾಡಿಕೊಡುತ್ತೀರೆಂಬುದನ್ನು ಹೇಳಬೇಕು.

ಶ್ರೀ ಜಿ. ಬಸವಣ್ಣಪ್ಪ.— ಈ ಕೆಲಸಕಾರ್ಯಗಳು ತಾ. ೧-೪-೮೭ ರಿಂದ ಜಿಲ್ಲಾಪರಿಷತ್ತಿಗೆ ವರ್ಗಾವಣೆಯಾಗಿರುತ್ತವೆ. ನಮಗೆ ಏನಾದರೂ ಆರ್ಜಿಗಳು ಬಂದರೆ ನಾವು ಕೂಡ ಅವುಗಳನ್ನು ಅಲ್ಲಿಗೇ ಕಳುಹಿಸಿಕೊಡುತ್ತೇವೆ. ನಿಮ್ಮ ಪರವಾಗಿ ನಾವು ಕೂಡ ಜಿಲ್ಲಾ ಪರಿಷತ್ತಿನವರಿಗೆ ತಿಳಿಸಿ ಇವುಗಳನ್ನು ಮಂಜೂರು ಮಾಡಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶಿರಾ ತಾಲ್ಲೂಕಿನಲ್ಲಿ ಕಲ್ಲು ಮಳೆಯಿಂದ ಉಂಟಾದ ಬೆಳೆಯ ನಾಶದ ಬಗ್ಗೆ

೧೮೪೫. ಶ್ರೀ ಸಿ. ಪಿ. ಮೂಡಲಗಿರಿಯಪ್ಪ, (ಶಿರಾ).—ಮಾನ್ಯ ಕಂದಾಯ ಯೋಜನಾ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿರಾ ತಾಲ್ಲೂಕಿನಲ್ಲಿ ತಾರೀಖು ೨೪ನೇ ಏಪ್ರಿಲ್ ೮೮ ರಂದು ಅಲೇಕಲ್ಲು ಮಳೆ ಬಿದ್ದು ಪರಿಣಾಮವಾಗಿ ರೈತರು ಲಕ್ಷಾಂತರ ರೂಪಾಯಿ ಬೆಳೆಯು ನಾಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಪರಿಹಾರವನ್ನೊದಗಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಮತ್ತು ನೀರಾವರಿ ಸಚಿವರು).—

ಅ) ಹೌದು

ಆ) ಸದರೀ ಪ್ರಕರಣದಲ್ಲಿ ಒಟ್ಟು ೨೦೭ ಜನರಿಗೆ ತೊಂದರೆಯಾಗಿದ್ದು, ಈ ಪೈಕಿ ೫೫ ಜನ ಸಣ್ಣ ಮಾತ್ರ ಅತಿ ಸಣ್ಣ ರೈತರಿರುತ್ತಾರೆ. ಇವರ ವಾರ್ಷಿಕ ವರಮಾನ ೩೫೦೦.೦೦ ರೂ. ಗಳಿಗಿಂತ ಕಡಿಮೆ ಇದ್ದು ನಿಯಮಾವಳಿಗಳ ಪ್ರಕಾರ ಪರಿಹಾರಕ್ಕೆ ಅರ್ಹರಿರುತ್ತಾರೆ. ಬೆಂಗಳೂರು ವಿಭಾಗಾಧಿಕಾರಿಗಳಿಂ ಇವರಿಗೆ ಪರಿಹಾರ ಮಂಜೂರು ಮಾಡುವ ದಿಶೆಯಲ್ಲಿರುತ್ತಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ. —ಮಾನ್ಯ ಅಧ್ಯಕ್ಷರೆ ಈ ಬಗ್ಗೆ ನಾನು ಒಂದು ಸಮಿತಿಯನ್ನು ಕರೆದಿದ್ದೇನೆ. ಅದರಲ್ಲಿ ಯಾವ ಯಾವ ರೀತಿ ಸಹಾಯ ಮಾಡಬೇಕೆಂದು ಒಂದು ನಿರ್ಣಯವನ್ನು ಮಾಡಿದ್ದೇವೆ.

ಶ್ರೀ ಸಿ. ಪಿ. ಮೂಡಲಗಿರಿಯಪ್ಪ. —ಮಾನ್ಯ ಅಧ್ಯಕ್ಷರೆ. ಸರ್ಕಾರದ ಕ್ರಮವನ್ನು ಅಭಿನಂದಿಸುತ್ತೇನೆ. ಆದರೆ ಅಂಕಿ ಅಂಶಗಳನ್ನು ತಂದಿರುವುದು ಬಹಳ ತಪ್ಪಾಗುತ್ತದೆ. ನಾನಂ ಆ ದಿವಸ ಸ್ಥಳದಲ್ಲೇ ಇದ್ದೆ. ಸುಮಾರು ೫೦೦ ಜನ ರೈತರು ಅಲ್ಲಿಗೆ ಬಂದಿದ್ದರು. ಆದರೆ ಇವರು ೨೦೭ ಜನ ಮಾತ್ರ ಬಂದಿದ್ದರು ಎಂದು ಕೊಟ್ಟಿದ್ದಾರೆ. ಇದು ಸರಿಯಲ್ಲ. ಇದನ್ನು ಮಾನ್ಯ ಸಚಿವರು ಪುನರ್ ಪರಿಶೀಲಿಸಿ ಯಾರ್ಯಾರು ನೊಂದವರಿದ್ದಾರೆ ಅವರನ್ನೆಲ್ಲಾ ಗುರ್ತಿಸಿ ಪರಿಹಾರವನ್ನು ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ. —ಪರಿಶೀಲಿಸಿ ಅರ್ಹರಾದವರಿಗೆ ಪರಿಹಾರವನ್ನು ಕೊಡಿಸುತ್ತೇನೆ.

ಕರ್ನಾಟಕ ಉದ್ಯೋಗ ವಿನಿಮಯ ಕೇಂದ್ರಗಳ ಬಗ್ಗೆ

೧೪೯೮. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು). —ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕದಲ್ಲಿರುವ ಉದ್ಯೋಗ ವಿನಿಮಯ ಕೇಂದ್ರಗಳ ಸಂಖ್ಯೆ ಎಷ್ಟು ?

ಆ) ಕಳೆದ ಮೂರು ವರ್ಷಗಳಲ್ಲಿ ಈ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಣಿಯಾದ ಅಭ್ಯರ್ಥಿಗಳ ಒಟ್ಟು ಸಂಖ್ಯೆ ಎಷ್ಟು ?

(ವಿದ್ಯಾರ್ಹತೆವಾರು ವಿವರ ನೀಡುವುದು)

೧ ಪ್ರೌಢಶಾಲೆ ಮತ್ತು ಅದಕ್ಕಿಂತ ಕೆಳಗೆ ವಿದ್ಯಾರ್ಹತೆ ಪಡೆದವರು.
೨ ಎಸ್. ಎಸ್. ಎಲ್. ಸಿ. ಉತ್ತೀರ್ಣರಾದವರು
೩ ಸಾಮಾನ್ಯ ಪದವೀಧರರು
೪ ಐ ಟಿ ಐ ತರಬೇತಿ ಪಡೆದವರು
೫ ತಾಂತ್ರಿಕ ಪದವೀಧರರು
೬ ಡಿಪ್ಲೊಮೋದಾರರು
೭ ವೈದ್ಯಕೀಯ ಪದವೀಧರರು

ಎಸ್. ಕೆ. ಕಾಂತಾ (ಕಾರ್ಮಿಕ ಸಚಿವರು). —

ಅ) ಕರ್ನಾಟಕದಲ್ಲಿ ಒಟ್ಟು ಮೂವತ್ತೆರಡು ಉದ್ಯೋಗ ವಿನಿಮಯ ಕೇಂದ್ರಗಳು ಇರುತ್ತವೆ.

ಆ) ಕಳೆದ ಮೂರು ವರ್ಷಗಳಲ್ಲಿ ಅಂದರೆ ೧೯೮೫ ರಿಂದ ೧೯೮೭ರವರೆಗೆ ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿಸಿಕೊಂಡ ಅಭ್ಯರ್ಥಿಗಳ ವಿವರ ಈ ಕೆಳಕಂಡಂತಿದೆ. —

ವರ್ಷ	ಅಭ್ಯರ್ಥಿಗಳ ಸಂಖ್ಯೆ
೧೯೮೫	೨,೦೯,೪೭೩
೧೯೮೬	೧,೮೫,೧೮೬
೧೯೮೭	೨,೨೧,೨೨೭

ನೊಂದಾಪಣೆ ಮಾಡಿಸಿಕೊಂಡ ಅಭ್ಯರ್ಥಿಗಳ ಬಗ್ಗೆ ವಿದ್ಯಾರ್ಹತೆ ಆಧಾರಿತ ಮಾಹಿತಿ ಇರುವುದಿಲ್ಲ.